197200/2021

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 555
2. ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತರಿಸುವ ದಿನಾಂಕ: : 16-12-2021
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಆದಾಯ ಗಣನೀಯವಾಗಿ ಕುಸಿದಿರುವುದು ಹಾಗೂ ಬಾಕಿ ವಸೂಲಿ ಮತ್ತು ತೆರಿಗೆ ಸಂಗ್ರಹದಲ್ಲಿ ನಿರೀಕ್ಷಿತ ಸುಧಾರಣೆ ಕಾಣದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಕೋವಿಡ್-19 ಎರಡನೇ ಅಲೆಯ ನಿರ್ಬಂಧಗಳಿಂದ 2021ರ ಮೇ ಮತ್ತು ಜೂನ್ ತಿಂಗಳಿನಲ್ಲಿ ರಾಜ್ಯದ ರಾಜಸ್ವ ಸ್ವೀಕೃತಿಯು ಕುಂಠಿತವಾಗಿರುತ್ತದೆ. ಕೋವಿಡ್-19ರ ನಿರ್ಬಂಧಗಳ ಸಡಿಲಿಕೆಯಿಂದಾಗಿ 2021ರ ಜುಲೈ ತಿಂಗಳಿನಿಂದ ಆರ್ಥಿಕ ಚಟುವಟಿಕೆಗಳು ಪ್ರಾರಂಭವಾಗಿದ್ದು, ಆರ್ಥಿಕ ಚಟುವಟಿಕೆಯಲ್ಲಿ ಚೇತರಿಕೆ ಕಂಡುಬಂದಿರುತ್ತದೆ. ಪ್ರಸ್ತುತ ರಾಜಸ್ವ ಸ್ವೀಕೃತಿಯು ಸುಧಾರಣೆಯ ಹಾದಿಯಲ್ಲಿದೆ.</td></tr>
<tr><td>ಆ)</td><td>ಹಾಗಿದ್ದಲ್ಲಿ, ರಾಜ್ಯದ ಆದಾಯ ಹೆಚ್ಚಿಸುವ ಮತ್ತು ಯಶಸ್ವಿಯಾಗಿ ಬಾಕಿ ತೆರಿಗೆ ವಸೂಲಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕಠಿಣ ಕ್ರಮಗಳೇನು;</td><td>ರಾಜ್ಯದ ಆದಾಯ ಹೆಚ್ಚಿಸುವ ಮತ್ತು ಯಶಸ್ವಿಯಾಗಿ ಬಾಕಿ ತೆರಿಗೆ ವಸೂಲಿ ಮಾಡಲು ಕರ ಸಮಾಧಾನ ಯೋಜನೆ – 2021ನು ಜಾರಿಗೊಳಿಸಿದ್ದು, ಅದರನ್ವಯ, ಪ್ರಸುತ ನವೆಂಬರ್-2021ರ ಅಂತ್ಯದವರೆಗೆ ರೂ.206.83 ಕೋಟಿಗಳು ಸಂಗ್ರಹವಾಗಿರುತ್ತದೆ.</td></tr>
<tr><td>ಇ)</td><td>ಪ್ರಸಕ್ತ ಆರ್ಥಿಕ ವರ್ಷದಲ್ಲಿ ಎಲ್ಲಾ ಮೂಲಗಳಿಂದ ಸರ್ಕಾರ ನಿರೀಕ್ಷಿಸಿದ್ದ ಒಟ್ಟು ರಾಜ್ಯದ ಆದಾಯ ಎಷ್ಟು ನವೆಂಬರ್ ಅಂತ್ಯಕ್ಕೆ ವಸೂಲಿಯಾದ ಅಥವಾ ಕ್ರೋಢೀಕರಿಸಿದ ಒಟ್ಟು ರಾಜ್ಯದ ಆದಾಯ ಎಷ್ಟು;</td><td>ಪ್ರಸಕ್ತ ಆರ್ಥಿಕ ವರ್ಷದಲ್ಲಿ ಎಲ್ಲಾ ಮೂಲಗಳಿಂದ ಸರ್ಕಾರ ನಿರೀಕ್ಷಿಸಿದ್ದ ಹಾಗೂ ವಸೂಲಿಯಾದ ಒಟ್ಟು ರಾಜ್ಯದ ಆದಾಯ ಈ ಕೆಳಕಂಡಂತಿರುತ್ತದೆ.<br>ರೂ. ಕೋಟಿಗಳಲ್ಲಿ
<table>
<tr><th>ಕ್ರ.ಸಂ.</th><th>ವಿವರ</th><th>2021-22ನೇ ಸಾಲಿನ ಗುರಿ</th><th>ಅಕ್ಟೋಬರ್ 2021ರ ಅಂತ್ಯದವರೆಗೆ ಸಂಗ್ರಹವಾದ ತೆರಿಗೆ (ಮಹಾಲೇಖಪಾಲರ ಲೆಕ್ಕದನ್ವಯ)</th></tr>
<tr><td>1</td><td>ವಾಣಿಜ್ಯ ತೆರಿಗೆ</td><td>63765.00</td><td>38623.37</td></tr>
<tr><td>2</td><td>ರಾಜ್ಯ ಅಬಕಾರಿ</td><td>24580.00</td><td>14615.01</td></tr>
<tr><td>3</td><td>ನೋಂದಣಿ ಮತ್ತು ಮುದ್ರಾಂಕ</td><td>7514.80</td><td>3423.56</td></tr>
<tr><td>4</td><td>ಸಾರಿಗೆ</td><td>12655.00</td><td>7183.36</td></tr>
<tr><td>5</td><td>ಇತರ</td><td>2979.18</td><td>311.04</td></tr>
<tr><td></td><td>ಒಟ್ಟು</td><td>111493.98</td><td>64156.33</td></tr>
</table></td></tr>
<tr><td>ಈ)</td><td>ರಾಜ್ಯ ಸರ್ಕಾರ ಕಳೆದ ಆರ್ಥಿಕ ವರ್ಷ ಎಲ್ಲಾ</td><td>ರಾಜ್ಯ ಸರ್ಕಾರ ಆರ್ಥಿಕ ವರ್ಷ 2020-21ರಲ್ಲಿ ಎಲ್ಲಾ ಮೂಲಗಳಿಂದ ಪಡೆದ ಒಟ್ಟು ಸಾಲ ರೂ.84527.95 ಕೋಟಿಗಳು.</td></tr>
</table>



Generated from eOffice by G JAGADEESHA, CMO-JS(GJ), JOINT SECREATRY, CMO on 15/12/2021 11:35 AM

2021

| | | |
|---|---|---|
| | ಮೂಲಗಳಿಂದ ಎತ್ತಿದ ಒಟ್ಟು ಸಾಲ ಎಷ್ಟು; ಪ್ರಸಕ್ತ ರಾಜ್ಯ ತೀರಿಸಬೇಕಾಗಿರುವ ಒಟ್ಟು ಸಾಲ ಎಷ್ಟು; ಹಾಗೂ ಸಾಲದ ಮೇಲಿನ ಬಡ್ಡಿ ಎಷ್ಟು; | ಪ್ರಸಕ್ತ ರಾಜ್ಯ ತೀರಿಸಬೇಕಾದ ಒಟ್ಟು ಸಾಲ (31 ಮಾರ್ಚ್ 2021ರ ಅಂತ್ಯಕ್ಕೆ) ರೂ.307757.56 ಕೋಟಿಗಳು ಹಾಗೂ<br><br>ಆರ್ಥಿಕ ವರ್ಷ 2021-22ರಲ್ಲಿ ಬಡ್ಡಿ ಪಾವತಿಗಾಗಿ ಮೀಸಲಾದ ಮೊತ್ತ ರೂ. 27160.86 ಕೋಟಿಗಳು |
| ಉ) | ರಾಜ್ಯ ಆದಾಯ ಕ್ರೋಢೀಕರಣಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು) | 1. ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕಡಿಮೆ ತೆರಿಗೆ ಸಂಗ್ರಹಣೆ ಇರುವ ವಿಭಾಗ/ಸ್ಥಳಗಳಿಂದ ಹುದ್ದೆಗಳನು ಹೆಚ್ಚಿನ ವಾಣಿಜ್ಯ ಚಟುವಟಿಕೆ ಹೊಂದಿರುವ ಹಾಗೂ ಹೆಚ್ಚಿನ ತೆರಿಗೆ ಸಂಗ್ರಹಣೆಗೆ ಅವಕಾಶವಿರುವ ವಿಭಾಗ/ಸ್ಥಳಗಳಿಗೆ ಸ್ಥಳಾಂತರಿಸಲಾಗಿರುತ್ತದೆ. ಇದು ಹುದ್ದೆಗಳ ಹೊಸ ಸೃಷ್ಟಿ ಇಲ್ಲದೇನೆ, ಇರುವ ಹುದ್ದೆಗಳ ಪರಿಣಾಮಕಾರಿ ಬಳಕೆಯತ್ತ ಕ್ರಮವಾಗಿರುತ್ತದೆ.<br>2. ವಾಣಿಜ್ಯ ತೆರಿಗೆ ಇಲಾಖೆಯ ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿಗಳಲ್ಲಿ ಹಾಗೂ ಉಪ ಸರಕು ಮತ್ತು ಸೇವಾ ತೆರಿಗೆ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರುಗಳಿಗೆ ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ, ಹೆಚ್ಚುವರಿ ತೆರಿಗೆ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕರನಿರ್ಧರಣೆಯ ಹೆಚ್ಚಿನ ಅಧಿಕಾರ ಮತ್ತು ಜವಾಬ್ದಾರಿಗಳನ್ನು ಡಿಸೆಂಬರ್ 2021 ರಿಂದ ನೀಡಲಾಗಿದೆ. |

ಸಂಖ್ಯೆ: ಆಇ 99 ಸಿಎಸ್‌ಎಲ್ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



Generated from eOffice by G JAGADEESHA, CMO-JS(GJ), JOINT SECREATRY, CMO on 15/12/2021 11:35 AM